## ಚಾತುರ್ಮಾಸ್ಯ ಸಮರ್ಪಣೆ

ಕಾರ್ತಿಕ ಶುದ್ಧ ಏಕಾದಶಿಗೆ ಚಾತುರ್ಮಾಸ್ಯ ವ್ರತ ಸಮಾಪ್ತವಾಗುತ್ತದೆ.

ನಾಲ್ಕು ತಿಂಗಳು ಮಾಡಿದ ನಾಲ್ಕು ರೀತಿಯ ವ್ರತಗಳನ್ನು ನಾಲ್ಕು ರೂಪದ ಭಗವಂತನಿಗೆ ಒಟ್ಟಿಗೇ ಸಮರ್ಪಿಸುವ ಸಮಯ ಕಾರ್ತಿಕ ಶುದ್ಧ ಏಕಾದಶಿ.

ಆ ದಿವಸ ದೇವರ ಪೂಜೆ ಮುಗಿದ ಬಳಿಕ ಕೈಯಲ್ಲಿ ತುಳಸೀದಳವನ್ನು ಇಟ್ಟುಕೊಂಡು (ಸ್ತ್ರೀಯರು ಪುಷ್ಪಗಳನ್ನು ಇಟ್ಟುಕೊಂಡು) ಅದರ ಮೇಲೆ ನೀರನ್ನು ಹಾಕಿ ಅರ್ಘ್ಯಬಿಡುವಂತೆ ಅದನ್ನು ಅರ್ಘ್ಯಪಾತ್ರೆಯಲ್ಲಿ ಹಾಕಿ ಕೆಳಗಿನ ಮಂತ್ರವನ್ನು ಹೇಳುತ್ತ ಚಾತುರ್ಮಾಸ್ಯವ್ರತವನ್ನು ಸಮರ್ಪಿಸಬೇಕು.

**ಇದಂ ವ್ರತಂ ಮಯಾ ದೇವ**
**ಕೃತಂ ಪ್ರೀತ್ಯೈ ತವ ಪ್ರಭೋ ।**
**ನ್ಯೂನಂ ಸಂಪೂರ್ಣತಾಂ ಯಾತು**
**ತ್ವತ್ಪ್ರಸಾದಾಜ್ಜನಾರ್ದನ ।।**

**ದೇವ** — ನನ್ನಲ್ಲಿ ನಿಂತು ಈ ಚಾತುರ್ಮಾಸ್ಯವ್ರತವನ್ನು ಮಾಡಿದ ಓ ಸ್ವಾಮಿ,

**ಪ್ರಭೋ** — ಸಕಲ ಜೀವರಾಶಿಗಳಿಂದ ಕರ್ಮಗಳನ್ನು ಮಾಡಿಸುವ ಮಹಾಸಾಮರ್ಥ್ಯವುಳ್ಳವನೇ, ಅ ಕರ್ಮಗಳಿಗೆ ಫಲವನ್ನು ನೀಡುವ ದೊರೆಯೇ,

**ತವ ಪ್ರೀತ್ಯೈ** — ನೀನು ಪ್ರೀತನಾಗಲಿ ಎಂಬ ಉದ್ದೇಶದಿಂದ

**ಇದಂ ವ್ರತಂ** — ಈ ಚಾತುರ್ಮಾಸ್ಯವ್ರತವನ್ನು

ಮಯಾ ಕೃತಮ್ — ನಾನು ಮಾಡಿದ್ದೇನೆ. (ನನ್ನಲ್ಲಿ ನಿಂತು ನೀನು ಮಾಡಿಸಿದ್ದಿ, ಸ್ವಾಮಿ)

**ಜನಾರ್ದನ —** ಹುಟ್ಟು ಸಾವಿಗಳಿಲ್ಲದ ದೇವ, ಭಕ್ತರ ಸಂಸಾರವನ್ನು ಕಳೆಯುವ ಪ್ರಭೋ, ತ್ವತ್-ಪ್ರಸಾದಾತ್ — ನಿನ್ನ ಅನುಗ್ರಹದಿಂದ

**ನ್ಯೂನಂ —** ಈ ವ್ರತ ಮಾಡಬೇಕಾದರೆ ಉಂಟಾಗಿರುವ ನ್ಯೂನತೆಗಳು

**ಸಂಪೂರ್ಣತಾಂ ಯಾತು —** ಪರಿಪೂರ್ಣವಾಗಲಿ.

ಅಲ್ಪನಾದ ನನ್ನಿಂದ ನ್ಯೂನತೆಗಳು ಉಂಟಾಗಿರುವದು ನಿಶ್ಚಿತ. ಆದರೆ ನಿನ್ನ ಅನುಗ್ರಹದಿಂದ ಆ ನ್ಯೂನತೆಗಳು ಕಳೆದು ವ್ರತ ಪರಿಪೂರ್ಣವಾಗಲಿ. ವ್ರತದ ಫಲವಾದ ನಿನ್ನ ಪ್ರೀತಿ ನನಗೆ ದೊರೆಯಲಿ.

**ಅನೇನ ಚಾತುರ್ಮಾಸ್ಯವ್ರತಾಚರಣೇನ**

**ಮಮ ಗುರ್ವಂತರ್ಗತ (ಪತ್ಯಂತರ್ಗತ)**

**ಪರಮಗುರ್ವಂತರ್ಗತ**

**ಶ್ರೀರಾಘವೇಂದ್ರತೀರ್ಥಾದಿ**

**ಸಮಸ್ತಪರಂಪರಾಗುರ್ವಂತರ್ಗತ**

**ಶ್ರೀಮದಾನಂದತೀರ್ಥ**

**ಭಗವತ್ಪಾದಾಚಾರ್ಯಗುರ್ವಂತರ್ಗತ**

**ಅನಿರುದ್ಧ-ಪ್ರದ್ಯುಮ್ನ-ಸಂಕರ್ಷಣ-ವಾಸುದೇವಾತ್ಮಕಃ**

**ಶ್ರೀ ಭೈಷ್ಮೀ-ಸತ್ಯಾಸಮೇತಃ ಶ್ರೀ ಗೋಪಾಲಕೃಷ್ಣಃ ಪ್ರೀಯತಾಮ್**

ಎಂದು ಪ್ರಾರ್ಥಿಸಬೇಕು.

ಆ ನಂತರ ಪ್ರದಕ್ಷಿಣೆ ಬಂದು ನಮಸ್ಕಾರ ಮಾಡಿ, ಚಾತುರ್ಮಾಸ್ಯದ ಅವಧಿಯಲ್ಲಿ ಉಂಟಾದ ದೇಹದ ಕ್ಲೇಶ ಮುಂತಾದ ಕಷ್ಟಗಳನ್ನು, ಅವನ್ನು ಮಾಡಿದ ನಂತರ ಉಂಟಾಗಿರುವ ಮಾನಸಿಕ ನೆಮ್ಮದಿ ತೃಪ್ತಿ ಮುಂತಾದ ಸುಖವನ್ನು ನೆನೆಸಿಕೊಂಡು “ಶ್ರೀಹರೇ, ನೀನು ಪ್ರೀತನಾಗಬೇಕು ಎಂಬ ಕಾರಣಕ್ಕಾಗಿ ನನ್ನ ಯೋಗ್ಯತೆಯಂತೆ ಇಷ್ಟು ವ್ರತಾಚರಣೆ ಮಾಡಿದ್ದೇನೆ, ಸ್ವಾಮಿನ್, ಸಂಸಾರದಲ್ಲಿ ವೈರಾಗ್ಯವನ್ನು ನೀಡು,

ಶಾಸ್ತ್ರಾಧ್ಯಯನದಲ್ಲಿ ಆಸಕ್ತಿಯನ್ನು ಕರುಣಿಸಿ ನಿನ್ನ ಜ್ಞಾನವನ್ನು ಅನುಗ್ರಹಿಸು, ನಿನ್ನ ಸೇವೆ ಮಾಡುವ ಭಕ್ತಿಯನ್ನು ಕರುಣಿಸು”  ಎಂದು ಪ್ರಾರ್ಥಿಸಬೇಕು.

ಆ ಬಳಿಕ ಇದೇ ರೀತಿ ಚಾತುರ್ಮಾಸ್ಯ ವ್ರತಾಚಾರಣೆ ಮಾಡಿದ ಬ್ರಾಹ್ಮಣ ದಂಪತಿಗಳಿಗೆ ನಾಲ್ಕೂ ತಿಂಗಳಲ್ಲಿ ತ್ಯಾಗ ಮಾಡಿದ್ದ ಪದಾರ್ಥಗಳನ್ನು ಶಕ್ತ್ಯನುಸಾರ ದಾನ ಮಾಡಬೇಕು.

ದ್ವಾದಶಿಯ ದಿವಸ ಕನಿಷ್ಠ ಒಬ್ಬ ಬ್ರಾಹ್ಮಣ ದಂಪತಿಗಳಿಗಾದರೂ ಭೋಜನವನ್ನು ನೀಡಿ ತಾನು ಸಕಾಲದಲ್ಲಿ ಪಾರಣೆಯನ್ನು ಮಾಡಬೇಕು.

## ಮೈಲಿಗೆಯಿದ್ದಾಗ ಸಮರ್ಪಣೆಯ ಕ್ರಮ

ಏಕಾದಶಿಯಂದು ಯಾವುದೇ ರೀತಿಯ ಅಶೌಚವಿದ್ದರೆ ಅಶೌಚ ಮುಗಿದ ದಿವಸ ಶುದ್ಧಿ ಸ್ನಾನವನ್ನು ಮಾಡಿ, ಜನಿವಾರವನ್ನು ಬದಲಾಯಿಸಿ ಪೂಜೆ ಮುಗಿದ ನಂತರ ಸಮರ್ಪಣೆಯನ್ನು ಮಾಡಬೇಕು.

ಸ್ತ್ರೀಯರು ರಜಸ್ವಲೆಯರಾಗಿದ್ದರೆ ಅವರ ಪತಿ, ತಂದೆ ಮುಂತಾದವರು ಆ ಸ್ತ್ರೀಯರ ಪರವಾಗಿ ವ್ರತದ ಸಮರ್ಪಣೆಯನ್ನು ಮಾಡಬೇಕು. ಆ ಹೆಣ್ಣುಮಗಳು ಐದನೆಯ ನೀರಿನ ದಿವಸ ಶುದ್ಧಿಸ್ನಾನದ ನಂತರ ಸ್ವಯಂ ಸಮರ್ಪಣೆಯನ್ನು ಮಾಡಬೇಕು.

## ಶೂದ್ರರ ಸಮರ್ಪಣೆಯ ಕ್ರಮ

ಮೇಲೆ ಹೇಳಿದ ವಿಷಯಗಳನ್ನು ಮನಸ್ಸಿನಲ್ಲಿ ಚಿಂತನೆ ಮಾಡಿ ಸಮರ್ಪಣೆ ಮಾಡಿದರೆ ಸಾಕು. ಮಂತ್ರ, ತಂತ್ರ ಎರಡರ ಆವಶ್ಯಕತೆಯೂ ಇಲ್ಲ.

ದೇವರಿಗೆ ನಮಸ್ಕಾರ ಮಾಡಿ ಸಮಸ್ತವನ್ನೂ ಒಪ್ಪಿಸಿಕೊಳ್ಳಬೇಕು.

## ಸಂಕಲ್ಪ ಮತ್ತು ಸಮರ್ಪಣೆಗಳ ಅನಿವಾರ್ಯತೆ

ಸಂಕಲ್ಪ, ಮತ್ತು ಸಮರ್ಪಣೆ ಇಲ್ಲದ ಯಾವುದೇ ವ್ರತ ಫಲಪ್ರದವಾಗುವದಿಲ್ಲ ಎನ್ನುವ ಎಚ್ಚರವಿರಲಿ. ನಾವು ಮಾಡುವ ಧರ್ಮ **“ಪ್ರೋಜ್ಝಿತಕೈತವ”**ವಾಗುವದೇ ಸಂಕಲ್ಪದಿಂದ.

ಆಚಾರ್ಯರು ಹೇಳುತ್ತಾರೆ — ಫಲಾನಪೇಕ್ಷಯಾ ಪ್ರೋಜ್ಝಿತಕೈತವಃ ಎಂದು. ಯಾವುದೇ ಐಹಿಕ ಫಲವನ್ನು ಅಪೇಕ್ಷಿಸದೇ ಕೇವಲ ಭಗವಂತನ ಪ್ರೀತಿಯನ್ನು, ಜ್ಞಾನ ಭಕ್ತಿ ವೈರಾಗ್ಯ ಮೋಕ್ಷಗಳನ್ನು ಅಪೇಕ್ಷಿಸುವದು ಸಂಕಲ್ಪ.

ನಾವು ಮಾಡುವ ಧರ್ಮ ಶ್ರೇಷ್ಠತೆಯನ್ನು ಪಡೆಯುವದು ದೇವರಿಗೆ ಸಮರ್ಪಣೆ ಮಾಡುವದರಿಂದ. **"ಈಶ್ವರಾರ್ಪಣೇನ ಪರಮಃ"** ಎಂದು ಆಚಾರ್ಯರು ತಿಳಿಸುತ್ತಾರೆ.

ದೇವರಿಗೆ ಸಮರ್ಪಿತವಾದ ಸತ್ಕರ್ಮ ಅನಂತ ಫಲವನ್ನು ನೀಡುತ್ತದೆ.

ಹೀಗಾಗಿ ವ್ರತ ಮಾಡಿಯೂ ಸಂಕಲ್ಪ, ಸಮರ್ಪಣೆಗಳನ್ನು ಮಾಡಲಿಲ್ಲ ಎಂದರೆ ಕೇವಲ ಶ್ರಮವಷ್ಟೇ.

**"ಸ್ವನುಷ್ಠಿತಸ್ಯ ಧರ್ಮಸ್ಯ ಸಂಸಿದ್ಧಿರ್ಹರಿತೋಷಣಮ್"** ಎಂದು ಭಾಗವತ ಹೇಳುತ್ತದೆ. ನಾವು ಮಾಡಿದ ಧರ್ಮದಿಂದ ಬಯಸಬೇಕಾದ ಫಲವೇನು? ದೇವರ ಪ್ರೀತಿ. ಆ

ದೇವರ ಪ್ರೀತಿ ಅನಂತವಾಗಿ ದೊರೆಯಬೇಕಾದರೆ ಈ ಸಂಕಲ್ಪ ಸಮರ್ಪಣೆಗಳನ್ನು ಮಾಡಬೇಕು.

ಅಕಸ್ಮಾತ್ ಹಿಂದೆ ಮಾಡಿದ ಕರ್ಮಗಳನ್ನು ಸಮರ್ಪಿಸದಿದ್ದಲ್ಲಿ, ಅಥವಾ ಸರಿಯಾಗಿ ಸಮರ್ಪಿಸದೇ ಇದ್ದಲ್ಲಿ ಮತ್ತೆ ಸಮರ್ಪಿಸಿ. ತಪ್ಪಿಲ್ಲ. ಎಂದೋ ಮಾಡಿದ ಕರ್ಮವನ್ನು ಇಂದು ಭಕ್ತಿಯಿಂದ ಸಮರ್ಪಿಸಿದರೂ ಹರಿ ಒಲಿಯುತ್ತಾನೆ ಎಂದು ನಮ್ಮ ಶ್ರೀ ನಾರಾಯಣಪಂಡಿತಾಚಾರ್ಯರು ತಿಳಿಸುತ್ತಾರೆ.

ನೀವು ಮಾಡಿರುವ ವ್ರತಾಚರಣೆಯಿಂದ ಸಮಸ್ತ ಗುರುಗಳು, ದೇವತೆಗಗಳು, ಭಾರತೀಪತೀಶನಾದ ಶ್ರೀಮದುಡುಪಿನ ಶ್ರೀಕೃಷ್ಣ ಪ್ರೀತನಾಗಲಿ, ಜ್ಞಾನ ಭಕ್ತಿ ವೈರಾಗ್ಯಗಳನ್ನು ಕರುಣಿಸಲಿ ಎಂಬ ಹಾರೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ

## ಚಾತುರ್ಮಾಸ್ಯದ ಕುರಿತ ವಿಶ್ವನಂದಿನಿ ಲೇಖನಗಳು

ಕೆಳಗಿನ ಯಾವುದೇ ಲಿಂಕನ್ನು ಒತ್ತಿದರೆ
ಆಯಾ ಪುಟ ತೆರೆದುಕೊಳ್ಳುತ್ತದೆ

### ಚಾತುರ್ಮಾಸ್ಯದ ವ್ರತಾಚರಣೆ ಕಡ್ಡಾಯವೇ?

ಯಾವುದೇ ಒಂದು ವ್ರತ ಕಡ್ಡಾಯ ಅಥವಾ ಕಡ್ಡಾಯವಲ್ಲ ಎಂದು ಹೇಗೆ ತಿಳಿಯುವದು ಎಂಬ ಪ್ರಶ್ನೆಯ ವಿವರಣೆ ಇಲ್ಲಿದೆ.

### ಮೂರು ಮಹಾವ್ರತಗಳು

ಸಜ್ಜನನಾದವನು ಮಾಡಲೇಬೇಕಾದ ವ್ರತಗಳು ಕೃಷ್ಣಾಷ್ಟಮೀ. ಏಕಾದಶೀ, ಚಾತುರ್ಮಾಸ್ಯ. ನಾವು ನಿಮ್ಮ ಜೀವನದಲ್ಲಿ ಯಾವ ವ್ರತವನ್ನು ಬಿಟ್ಟರೂ ಇವನ್ನು ಮಾತ್ರ ಸರ್ವಥಾ ಬಿಡತಕ್ಕದ್ದಲ್ಲ.  ನಮ್ಮಲ್ಲಿನ ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಅಭಿವ್ಯಕ್ತಿಗೊಳಿಸುವ, ನಮ್ಮ ಸಾಧನಮಾರ್ಗದ ಉಪದ್ರವಗಳನ್ನು ವಿನಾಶ ಮಾಡುವ, ನಮ್ಮನ್ನು ಸಂಸಾರಸಾಗರದಿಂದ ಉದ್ಧರಿಸುವ ಗುರುಗಳ ಬಳಿ ನಮ್ಮನ್ನು ಕರೆದುಕೊಂಡು ಹೊಗುವ ಈ ಶ್ರೇಷ್ಠವ್ರತಗಳ ಮಾಹಾತ್ಮ್ಯದ ಚಿಂತನೆ ಈ ಲೇಖನದಲ್ಲಿದೆ.

## ಚಾತುರ್ಮಾಸ್ಯವ್ರತದ ಮಾಹಾತ್ಮ್ಯ

ಚಾತುರ್ಮಾಸ್ಯ ವ್ರತ ಎನ್ನುವದು ಪರಮಾತ್ಮನ ಕಾರುಣ್ಯದ ಅದ್ಭುತವಾದ ಕುರುಹು. ಭವಸಾಗರದಿಂದ ನಮ್ಮನ್ನು ಉದ್ಧರಿಸುವ ಈ ಶ್ರೇಷ್ಠ ವ್ರತದ ಕುರಿತು ಸ್ವಯಂ ಪರಮಾತ್ಮನೇ ತಿಳಿಸಿ ಹೇಳಿರುವ ಮಾತುಗಳ ಅನುಸಂಧಾನ ಈ ಲೇಖನದಲ್ಲಿ.

## ಶಾಕವ್ರತ

ಶಾಕವ್ರತದಲ್ಲಿ ನಿಷಿದ್ಧ ಪದಾರ್ಥಗಳು ಯಾವುವು, ಯಾವನ್ನು ಸ್ವೀಕರಿಸಬಾರದು, ಯಾವನ್ನು ಸ್ವೀಕರಿಸಬೇಕು ಮತ್ತು ಅಡಿಗೆಯ ಪದ್ಧತಿಯೇನು ಎಂದು ತಿಳಿಸುವ ಲೇಖನ.

## ದಧಿವ್ರತ

ಏಕಾದಶಿಯಂದು ಮಾಡಬೇಕಾದ ಶಾಕವ್ರತದ ಸಮರ್ಪಣೆ, ಉಪಾಯನದಾನ, ಧಧಿವ್ರತದ ಸಂಕಲ್ಪ, ಯಾವ ಮಜ್ಜಿಗೆ ವ್ರತಕ್ಕೆ ಬರುತ್ತದೆ ಯಾವುದು ಬರುವದಿಲ್ಲ ಎನ್ನುವ ವಿಷಯಗಳ ಕುರಿತ ಲೇಖನ.

## ಕ್ಷೀರವ್ರತ

ಭಾದ್ರಪದ ಶುದ್ಧ ಏಕಾದಶಿಯಂದು ಜಯಾಪತಿ ಸಂಕರ್ಷಣನಿಗೆ ಮಾಡಬೇಕಾದ ದಧಿವ್ರತದ ಸಮರ್ಪಣೆ ಮತ್ತು ಕೃತಿಪತಿ ಪ್ರದ್ಯುಮ್ನನ ಪ್ರೀತಿಗಾಗಿ ಮಾಡಬೇಕಾದ ಕ್ಷೀರವ್ರತದ ಸಂಕಲ್ಪದ ಮಂತ್ರಗಳ ಅರ್ಥವಿವರಣೆ ಹಾಗೂ ಮೊಸರಿನ ದಾನವನ್ನು ನೀಡುವ ಕ್ರಮವನ್ನು ಈ ಲೇಖನದಲ್ಲಿ ವಿವರಿಸಲಾಗಿದೆ

## ದ್ವಿದಳವ್ರತ

ಆಶ್ವಯುಜ ಶುದ್ಧ ಏಕಾದಶಿಯಂದು ಮಾಡಬೇಕಾದ ಕ್ಷೀರವ್ರತದ ಸಮರ್ಪಣೆ ಮತ್ತು ದ್ವಿದಳವ್ರತದ ಸಂಕಲ್ಪದ ಕ್ರಮ ಮತ್ತು ಪಠಿಸಬೇಕಾದ ಶ್ಲೋಕಗ ಅರ್ಥವಿವರಣೆ ಈ ಲೇಖನದಲ್ಲಿದೆ.

## ದ್ವಿದಳವ್ರತದ ವಿಧಿನಿಷೇಧಗಳು

ದ್ವಿದಳವ್ರತದಲ್ಲಿ ನಿಷಿದ್ಧವಾದ ಪದಾರ್ಥಗಳು ಯಾವುವು, ಉಪಯೋಗಿಸಬೇಕಾದ ಪದಾರ್ಥಗಳು ಯಾವುವು, ಯಾವ ರೀತಿಯ ಅಡಿಗೆ ಸೂಕ್ತ ಎಂಬುದರ ಕುರಿತ ಲೇಖನ. ಕಡಲೇಕಾಯಿ ಬೀಜವನ್ನು

ಸ್ವೀಕರಿಸಬೇಕೇ ಸ್ವೀಕರಿಸಬಾರದೆ ಎಂಬ ವಿಷಯದ ಕುರಿತ ವಿವರಣೆಯೂ ಇಲ್ಲಿದೆ.

[ಅಶಕ್ತರು ಚಾತುರ್ಮಾಸ್ಯ ಮಾಡುವ ಕ್ರಮ]

ಆರೋಗ್ಯದ ಸಮಸ್ಯೆ ಇರುವವರು, ಕೆಲಸದಲ್ಲಿ ಅಪಾರ ದೈಹಿಕ ಶ್ರಮ ಇರುವವರು, ಹತ್ತಾರು ದಿವಸಗಳ ಮನೆಯಿಂದ ಹೊರಗೆ ಇರಬೇಕಾದವರು ಯಾವ ರೀತಿ ಚಾತುರ್ಮಾಸ್ಯವನ್ನು ಆಚರಿಸಬಹುದು ಎನ್ನುವದರ ಕುರಿತ ವಿವರಣೆ ಈ ಲೇಖನದಲ್ಲಿದೆ.

[ಚಾತುರ್ಮಾಸ್ಯ ಸಮರ್ಪಣೆಯ ಕ್ರಮ]

ಸಮಗ್ರ ನಾಲ್ಕು ತಿಂಗಳ ಚಾತುರ್ಮಾಸ್ಯವನ್ನು ಗುರ್ವಂತರ್ಯಾಮಿಗೆ ಸಮರ್ಪಿಸುವ ಕ್ರಮದ ವಿವರಣೆ

**[ವಿಶ್ವನಂದಿನಿ App]**

**[www.vishwanandini.com]**

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491